ಪದಬಂಧ



ಎಡದಿಂದ ಬಲಕ್ಕೆ:

1. ಅವನಿಂದ ಎಲ್ಲರಿಗೂ ಸಿಕ್ಕಿದ್ದು ಬರೀ ಸಂತಸ (3)
3. ಪರಿಣಾಮದ ಅರಿವಿಲ್ಲದ್ದು ಭಾರೀ ತಪ್ಪಾಯಿತು (3)
4. ಮಾಸಾಶನ ದೊರೆತ ನಂತರವಷ್ಟೇ ಕಷ್ಟ ಪರಿಹಾರವಾಯಿತು (3)
6. ಖಂಜಿರ ನುಡಿಸುವುದನ್ನು ಕಲಿತಿದ್ದಾನೆ ಈ ಅಗಸ (3)
7. ಮಹಾನ್ ಹಾನಿಯನ್ನು ತಪ್ಪಿಸಿದ ಸಾಧನೆ ಅತ್ಯಂತ ಎತ್ತರದ್ದು (4)
9. ಕುಂಕುಮ ತರಲಿಲ್ಲವೆಂದು ಇದೆಂಥ ಚುಚ್ಚು ನುಡಿ (4)
11. ದ್ವಾಪರ ಯುಗ ಕುರಿತ ಕವಿತೆ ರಚಿಸಿದವ ಈತನೇ (4)
13. ಜಲಕ್ಷಾಮವನ್ನು ಎದುರಿಸಿದವರು ನೂರು ಸಾವಿರ ಜನ (4)
15. ಅಂಜುಬುರುಕನಿಗೆ ಗೊತ್ತಿಲ್ಲ ಬಿಡಿ, ಇದು ನೀರಲ್ಲಿ ಹುಟ್ಟಿದ್ದು, ತಾವರೆ 3)
17. ಆರತಕ್ಷತೆಗೆ ತಂದ ವಸ್ತುಗಳು ಭದ್ರ ಕಾವಲಿನಲ್ಲಿವೆ ತಾನೇ? (3)
18. ಕಾಣೆಯಾದವರು ತಲುಪಿದ್ದು ಕ್ರೂರ ಶಿಕ್ಷೆಗಳ ತಾಣ (3)
19. ವಾರಸುದಾರನನ್ನು ಪತ್ತೆ ಹಚ್ಚಿದ್ದು ನಾಲಿಗೆ ಹೌದೇ? (3)

ಮೇಲಿಂದ ಕೆಳಕ್ಕೆ :

1. ಅಧ್ಯಾಪಕರ ಬಗೆಗೆ ಆತನಿಗೆ ಭಾರೀ ಗೌರವ (3)
2. ಆಕಾಶದಲ್ಲಿ ಕಂಡ ಹಕ್ಕಿಗಳ ಸಂಖ್ಯೆ ಹತ್ತು ಮುಟ್ಟಿತು (3)
3. ಪ್ರಸಾದವನ್ನು ನೀಡಿದ ಮೇಲಷ್ಟೇ ಆತ ತೃಪ್ತನಾದ (3)
5. ಕೂಸನ್ನು ಮಲಗಿಸುವ ವೇಳೆಗೆ ಮುಂಜಾನೆ ಬಂದಿತ್ತು (3)
7. ಮನಸ್ಸಿಗೆ ಬಿಸಿ ಹತ್ತಿದರೆ ದ್ವೇಷ ಮೂಡೀತು (4)
8. ನೀರಿಗೆ ಬರಲಿರುವ ತತ್ವಾರ ನೆನೆದರೇ ಹೆದರಿಕೆ, ನಡುಕ (4)
9. ಕುಂಚ ಕಲೆ ಕಲಿಯಲು ಪ್ರಯತ್ನಿಸಿದ್ದು ಸ್ವಲ್ಪವೇ ಸಮಯ (4)
10. ಸುತ್ತಲಿನ ಸುದ್ದಿ ತಿಳಿದಿದ್ದು ಕೊಂಚ ದಿನ (4)
12. ಕುಳಿತಿರಲು ಸಾಧ್ಯವೇ ಆಗದಷ್ಟು ಆತನ ತಳಮಳ (3)
14. ಆಕಾಶದಲ್ಲಿ ಕಣ್ಣಿಗೆ ಕಂಡ ದೃಶ್ಯ ಅತ್ಯಲ್ಪ ಕಾಲದ್ದು (3)
15. ಆತುರಗಾರರ ನಡುವೆ ಏನಿದೆ ವ್ಯತ್ಯಾಸ? (3)
16. ಜ್ಯೋತಿಯನ್ನು ಬೆಳಗುವ ಸಂಪ್ರದಾಯದ ಹುಟ್ಟು (3)

## 29-03-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸದ್ವರ್ತನೆ ; 3. ಅವನಿ ; 4. ನೆತ್ತರು ; 6. ಹಸುಗೂಸು ; 7. ಸಂಹಾರಕ ; 9. ಪಾಲುದಾರ ; 11. ವನಚರ ; 13. ಕರಾಮತಿ ; 15. ದಾರ್ಶನಿಕ ; 17. ಪುದೀನ ; 18. ದಡಿಯ ; 19. ವರ್ಧಮಾನ

ಮೇಲಿಂದ ಕೆಳಕ್ಕೆ :

1. ಸನಿಹ ; 2. ನೆನೆಸು ; 3. ಅಧೀರ ; 5. ರುಮಾಲು ; 7. ಸಂಭವ ; 8. ಕಠೋರ ; 9. ಪಾಲಕ ; 10. ರಸೀತಿ ; 12. ಚರಪು ; 14. ರಾಧೇಯ ; 15. ದಾನವ ; 16. ಕದನ

ಪ್ರಶ್ನಾಂಕಣ

# ಎಲೆ ಹರುಕ: ಅದೆಂಥ ಇರುವೆ?

ಈ ವರೆಗೆ ಗುರುತಿಸಲಾಗಿರುವಂತೆ 12,000 ಪ್ರಭೇದಗಳಿರುವ ಇರುವೆ ಸಾಮ್ರಾಜ್ಯದಲ್ಲಿ ಸಮೀಪ 50 ಪ್ರಭೇದಗಳ ಒಂದು ವಿಶಿಷ್ಟ ಗುಂಪಿದೆ. ಅವೇ "ಲೀಫ್ ಕಟರ್ ಅಥವಾ ಎಲೆ ಹರುಕ" ಇರುವೆಗಳು. ಹೆಸರೇ ಸೂಚಿಸುವಂತೆ ಈ ಇರುವೆಗಳು ಗಿಡ ಮರಗಳ ಹಸಿರೆಲೆಗಳನ್ನು ತಮ್ಮ ಬಲಿಷ್ಠ ದವಡೆಗಳಿಂದ ಹರಿಯುತ್ತವೆ ; ಕತ್ತರಿಸುತ್ತವೆ ( ಚಿತ್ರ1 ). ಹಾಗೆ ತುಂಡರಿಸಿದ ಎಲೆ ಚೂರುಗಳನ್ನು ಕಚ್ಚಿ ಹಿಡಿದು ತಮ್ಮ ಗೂಡಿಗೆ ಸಾಗಿಸುತ್ತವೆ ( ಚಿತ್ರ2 ). ಹಾಗೆ ಸಾಗಣೆಗೊಳ್ಳುವ ಎಲೆ ಚೂರುಗಳನ್ನೇ ಏರಿ ಕುಳಿತು ಅದೇ ಕುಟುಂಬದ ಪುಟ್ಟ ಇರುವೆಗಳು ಎಲೆ ತುಂಡನ್ನೂ, ಅದನ್ನು ಹೊತ್ತ ಇರುವೆಯನ್ನೂ ಶತ್ರುಗಳಿಂದ, ಪರಾವಲಂಬೀ ಧಾಳಿಕೋರರಿಂದ ಮತ್ತು ಎಲೆಗಳ್ಳರಿಂದ ರಕ್ಷಿಸುತ್ತವೆ ( ಚಿತ್ರ2 ರಲ್ಲಿ ಗಮನಿಸಿ ) !

ವಿಸ್ಮಯ ಏನೆಂದರೆ, ಎಲೆ ಹರುಕ ಇರುವೆಗಳು ಹಿಂಡು ಹಿಂಡಾಗಿ ಹೀಗೆ ಗೂಡಿಗೆ ಸಾಗಿಸಿ ಸಂಗ್ರಹಿಸುವ ಎಲೆ ಚೂರುಗಳು ಅವಕ್ಕೆ ನೇರ ಆಹಾರವಲ್ಲ! ಈ ಇರುವೆಗಳು ಇವೆಲ್ಲ ಎಲೆ ತುಣುಕುಗಳನ್ನು ತಮ್ಮ ಗೂಡಿನ ವಿಶೇಷ, ವಿಶಾಲ ಕೊಠಡಿಗಳಲ್ಲಿ ರಾಶಿ ಮಾಡಿ ಅದರ ಮೇಲೆ ವಿಶಿಷ್ಟ "ಶಿಲೀಂಧ್ರ ( ಫಂಗಸ್ )" ಗಳನ್ನು ಬೆಳೆಯಬಿಡುತ್ತವೆ. ಆ ಶಿಲೀಂಧ್ರಗಳಿಗೆ ಯಾವುದೇ ಸೋಂಕು ಬರದಂತೆ ಮಾಡಲು ತಮ್ಮ ಶರೀರದಲ್ಲೇ ಉತ್ಪಾದನೆಗೊಳ್ಳುವ ವಿಶಿಷ್ಟ "ಆಂಟಿಬಯೋಟಿಕ್"ಗಳನ್ನು ಬೆರೆಸುತ್ತವೆ. ಎಲೆಗಳನ್ನು ಕೊಳೆಸಿ, ತಿಂದು, ಹಾಗೆ ಆರೋಗ್ಯವಾಗಿ, ಸಮೃದ್ಧವಾಗಿ, ಪುಷ್ಟಿದಾಯಕವಾಗಿ ಬೆಳೆಯುವ ಶಿಲೀಂಧ್ರಗಳನ್ನು ಆಹಾರವಾಗಿ ಸೇವಿಸುತ್ತವೆ ! ಎಂಥ ಅತ್ಯದ್ಭುತ




ಪರಸ್ಪರಾವಲಂಬನೆ !

ಮತ್ತೊಂದು ವಿಶೇಷ ಏನೆಂದರೆ, ಅತ್ಯಂತ ಹೆಚ್ಚು "ಜನಸಂಖ್ಯೆ"ಯೊಡನೆ ಸಂಘ ಜೀವನ ನಡೆಸುವ ಪ್ರಾಣಿಗಳಲ್ಲಿ ಲೀಫ್ ಕಟರ್ ಇರುವೆಗಳದು ಮನುಷ್ಯರ ನಂತರದ ದ್ವಿತೀಯ ಸ್ಥಾನ. ನೆಲದ ಕೆಳಗೆ ನಿರ್ಮಾಣಗೊಳ್ಳುವ ಈ ಇರುವೆಗಳ ಗೂಡು ವಾಸ್ತವವಾಗಿ ಒಂದು "ಮಹಾ ನಗರ"ದಂತಿರುತ್ತದೆ. ರಾಣಿಗೆ, ಮೊಟ್ಟೆಗಳಿಗೆ, ಮರಿಗಳಿಗೆ, ಸೈನಿಕರಿಗೆ, ಕೆಲಸಗಾರರಿಗೆ ವಾಸಕ್ಕೆ ಹಾಗೂ ಶಿಲೀಂಧ್ರ ಬೇಸಾಯಕ್ಕೆ, ಶಿಲೀಂಧ್ರ ಸಾಕಣೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ದೂರ ಸಾಗಿಸಿ ಸಂಗ್ರಹಿಸಲಿಕ್ಕೆ, ... ಹಾಗೆಲ್ಲ ನಾನಾ ಉದ್ದೇಶಗಳಿಗಾಗಿ ಪ್ರತಿ ಗೂಡಿನಲ್ಲೂ ಸಾವಿರಾರು ಕೋಣೆಗಳಿರುತ್ತವೆ. ಪ್ರತಿ ಕುಟುಂಬದ ಜನಸಂಖ್ಯೆ ಒಂದು ಕೋಟಿಯನ್ನು ಮೀರುತ್ತದೆ! ಪ್ರತಿ ಗೂಡಿನ ವಿಸ್ತಾರ ಆರರಿಂದ ಏಳು ಸಾವಿರ ಚದರ ಅಡಿ ಮುಟ್ಟುತ್ತದೆ !

ಇಷ್ಟೊಂದು ಸಂಖ್ಯೆಯಲ್ಲಿ ಎಲೆಗಳನ್ನು ಕತ್ತರಿಸಲು ಗುಂಪು ಗುಂಪಾಗಿ, ಸಾಲು ಸಾಲಾಗಿ ಬರುವ ಈ ಇರುವೆಗಳ ಹಾವಳಿ ಎಷ್ಟು ತೀವ್ರ, ಎಷ್ಟು ಕ್ಷಿಪ್ರ ಎಂದರೆ ಒಂದೇ ಒಂದು ಗೂಡಿನ ಕೆಲಸಗಾರರು ಒಂದೇ ದಿನದಲ್ಲಿ ಒಂದು ಇಡೀ ವೃಕ್ಷವನ್ನು ಬೋಳಾಗಿಸುತ್ತವೆ. ಹಾಗಾಗಿಯೇ ಲೀಫ್ ಕಟರ್ ಇರುವೆಗಳು ಪಿಡುಗುಕಾರಕ ಕೀಟಗಳ ಪಟ್ಟಿಯಲ್ಲಿವೆ. ಗಾಯವಾಗುವಂತೆ ಬಲವಾಗಿ ಕಚ್ಚುವ ಸಾಮರ್ಥ್ಯವೂ ಈ ಇರುವೆಗಳಿಗಿದೆ. ಪ್ರಸ್ತುತ ಈ ಇರುವೆಗಳ ವಾಸ್ತವ್ಯ ಮಧ್ಯ ಅಮೆರಿಕ ಮತ್ತು ಮೆಕ್ಸಿಕೋ ಪ್ರದೇಶಗಳಿಗೆ ಸೀಮಿತವಾಗಿದೆ.

■ ಎನ್. ವಾಸುದೇವ್